ಓಎಸ್ ನಂ ೨೫೨-೨೦೧೫

ಪಿಡಬ್ಲ್ಯೂ-4

**ಸಾಕ್ಷಿಯನ್ನು ಇಂದು ದಿನಾಂಕಃ 02-03-2021 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

ಪಾಟೀ ಸವಾಲುಃ ಶ್ರೀ ಪಿ ಎನ್ ಎಸ್ ವಕೀಲರಿಂದ.

ನಾನು ವಾದಿಯ ಸಹೋದರ ಎಂದರೆ ಸರಿ. 2 ನೇ ಪ್ರತಿವಾದಿ ರೇವಣಸಿದ್ದಪ್ಪ ತನ್ನ ಭೂಮಿಯನ್ನು 1 ನೇ ಪ್ರತಿವಾದಿಗೆ ಮಾರಿದ್ದಾನೆ ಎಂದರೆ ಸರಿಯಲ್ಲ. ರೇವಣಸಿದ್ದಪ್ಪ ನಮ್ಮ ಮನೆಯ ಹೊಲೆಯ ಎಂದು ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆತ ನಮ್ಮ ಮನೆಯಲ್ಲಿ ನೌಕರ ಎಂದು ಯಾವತ್ತು ಕೆಲಸ ಮಾಡಿಲ್ಲ. ನಾನು ನನ್ನ ಪ್ರಮಾಣ ಪತ್ರದ 5 ನೇ ಖಂಡಿಕೆಯಲ್ಲಿ 2 ನೇ ಪ್ರತಿವಾದಿ ನೌಕರನೆಂದು ಕೆಲಸ ಮಾಡುತ್ತಿದ್ದ ಎಂದು ನಾನು ಬರೆದಿರುತ್ತೇನೆ ಎಂದರೆ ಸರಿಯಲ್ಲ. 1999 ರಲ್ಲಿ ನನ್ನ ಚಿಕ್ಕಪ್ಪ 2 ನೇ ಪ್ರತಿವಾದಿಗೆ ಜಮೀನನ್ನು ಮಾರಿ ಕಬ್ಜೆ ನೀಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು 2 ನೇ ಪ್ರತಿವಾದಿಯನ್ನು ದಾವಾ ಸ್ವತ್ತಿನ ಸ್ವಾಧೀನ ನೀಡುವಂತೆ ಕೋರಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ, ತದನಂತರ ಆತ ಅದನ್ನು ಅಲ್ಲಗಳೆದಿರುತ್ತಾನೆ.

2. ಕಳೆದ 21 ವರ್ಷಗಳಿಂದ 2 ನೇ ಪ್ರತಿವಾದಿ ಕಬ್ಜೆಯಲ್ಲಿದ್ದಾನೆ ಪಹಣಿಯಲ್ಲಿ ಆತನ ಹೆಸರು ಇದೆ ಎಂದರೆ ಸರಿಯಲ್ಲ. ಶಾಂತಪ್ಪ, ಹನಮಂತ ಕೋರೆ, ಅಂಬರಾಯ ಮತ್ತು ಹಣಮಂತ ರವರು 2ನೇ ಪ್ರತಿವಾದಿಗೆ 90 ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕಂದಾಯಗಳನ್ನು 2 ನೇ ಪ್ರತಿವಾದಿಯೇ ಪಾವತಿಸುತ್ತಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಹಿಸ್ಸೆ ಇಲ್ಲ, ನನ್ನ ಅಣ್ಣನಿಗೆ ಇದೆ. ನನ್ನ ಅಣ್ಣನ ಪರವಾಗಿ ನಾನು ಸುಳ್ಳು ಸಾಕ್ಷ್ಯ ಹೇಳಲು ಬಂದಿದ್ದೆನೆ, ಆತನಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೆ.ಸರಿ.ಇದೆ.**

ಅಪರ ಸಿವಿಲ್ ನ್ಯಾಯಾಧೀಶರು

ಆಳಂದ.